## ಕಸ ನಿರ್ವಹಣೆಯ ಫ್ಯಾಕ್ಟ್ ಶೀಟ್

- ಭಾರತದಲ್ಲಿ ಪ್ರತಿದಿನ 26000 ಟನ್ ಪ್ಲಾಸ್ಟಿಕ್ ಕಸ ಸೃಷ್ಟಿಯಾಗುತ್ತದೆ. ಇದರಲ್ಲಿ ದಿನವೊಂದಕ್ಕೆ ರೀಸೈಕಲ್ ಆಗುವ ಕಸದ ಪ್ರಮಾಣ ಕೇವಲ 2000 ಟನ್. ಅಂಕಿ ಅಂಶಗಳ ಪ್ರಕಾರ ನಮ್ಮಲ್ಲಿ ರೀಸೈಕಲ್ ಆಗುತ್ತಿರುವ ಪ್ಲಾಸ್ಟಿಕ್ ಕಸದ ಪ್ರಮಾಣ ಶೇ. 8ರಷ್ಟು ಮಾತ್ರ.
- 2012ರಲ್ಲಿ ಭಾರತದ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠವು ಮುಂದಿನ ಜನಾಂಗಗಳು ಅಣುಬಾಂಬಿಗಿಂತಲೂ ಹೆಚ್ಚಿನ ಅಪಾಯವನ್ನು ಪ್ಲಾಸ್ಟಿಕ್ ಮಾಲಿನ್ಯದಿಂದ ಎದುರಿಸಲಿವೆ ಎಂದು ಹೇಳಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ನಿಷೇಧಿಸಬೇಕೆಂದು ಅಭಿಪ್ರಾಯಪಟ್ಟಿತ್ತು.
- ಈಗ ನಾವು ಹೊಮ್ಮಿಸುತ್ತಿರುವ ನಗರ ಘನ ತ್ಯಾಜ್ಯದ ಪ್ರಮಾಣದಲ್ಲಿ ಶೇ.20ರಷ್ಟು ಮಾತ್ರ ಸಂಸ್ಕರಣೆಗೊಳ್ಳುತ್ತದೆ. ಉಳಿದದ್ದು ಭೂಭರ್ತಿ ತಾಣ ಮತ್ತು ನದಿ ಸಾಗರಗಳಿಗೆ ಹರಿದು ಹೋಗುತ್ತದೆ.
- ಭಾರತದ ಕಸ ಸಂಸ್ಕರಣ ಉದ್ಯಮಗಳಿಗೆ ವಾರ್ಷಿಕ 1500 ಕೋಟಿ ಡಾಲರ್‌ಗಳ ವ್ಯವಹಾರದ ಅವಕಾಶವಿದೆ.
- ವಿಶ್ವ ಕಸ ಸಂಸ್ಕರಣೆ ಉದ್ಯಮದ ವಹಿವಾಟು ಕಳೆದ ವರ್ಷ ಆರೂವರೆ ಸಾವಿರ ಕೋಟಿ ಡಾಲರ್‌ನಷ್ಟಿತ್ತು.
- ಉತ್ಪತ್ತಿಯಾಗುವ ಒಟ್ಟು ಕಸದಲ್ಲಿ ಕಾಲು ಭಾಗ ಒಣಕಸ. ಅದನ್ನು ಸಂಸ್ಕರಿಸಿ ಮರುಬಳಕೆ ಮಾಡಬಹುದು. ಒಟ್ಟು ಕಸದಲ್ಲಿ ಕಾಲು ಭಾಗವನ್ನು ದಹಿಸುತ್ತೇವೆ. ಉಳಿದಿದ್ದರಲ್ಲಿ ಅರ್ಧ ಭೂಭರ್ತಿ, ಇನ್ನರ್ಧ ಸಾಗರಗಳ ಪಾಲಾಗುತ್ತದೆ.
- ವಾರ್ಷಿಕ ಎರಡು ದಶಲಕ್ಷ ಟನ್ ಇ-ತ್ಯಾಜ್ಯ ನಮ್ಮಲ್ಲಿ ಉತ್ಪತ್ತಿಯಾಗುತ್ತಿದೆ. ಅದರಲ್ಲಿ ಅರ್ಧದಷ್ಟು ನೇರವಾಗಿ ಮರುಬಳಕೆ ಮಾಡಬಹುದು.
- ಬಾಹ್ಯಾಕಾಶದ ಉಪಗ್ರಹಗಳ ಕಸ ತೆಗೆಯಲು ನಾಸಾ ಟ್ರಾನ್ಸ್ ಅಸ್ತ್ರ ಎಂಬ ಕಂಪನಿಯೊಂದಿಗೆ ಎಂಟೂವರೆ ಲಕ್ಷ ಡಾಲರ್ ಮೊತ್ತದ ಕರಾರು ಮಾಡಿಕೊಂಡಿದೆ.
- ಏಕ ಬಳಕೆಯ ಪ್ಲಾಸ್ಟಿಕ್ ಲೋಟ, ಕೈಚೀಲ, ಪ್ಯಾಕೇಜಿಂಗ್ ಹಾಳೆಗಳು ಪೃಥ್ವಿಯನ್ನು ಇಂಚಿಂಚಾಗಿ ಕೊಲ್ಲುತ್ತಿವೆ.
- ಉತ್ಪಾದನೆಯ ಶೇ. 50ರಷ್ಟು ಪ್ಲಾಸ್ಟಿಕ್ ಏಕ ಬಳಕೆಯದಾಗಿರುತ್ತದೆ.
- ವಿಶ್ವದಲ್ಲಿ ಪ್ರತಿ ವರ್ಷ ಉತ್ಪತ್ತಿಯಾದ ಪ್ಲಾಸ್ಟಿಕ್‌ನ ಶೇ. 79ರಷ್ಟು ಭಾಗ ಭೂಭರ್ತಿಯಾದರೆ, ಶೇ. 12ರಷ್ಟನ್ನು ಸುಡಲಾಗುತ್ತದೆ. ಕೇವಲ ಶೇ. 9ರಷ್ಟು ಪ್ಲಾಸ್ಟಿಕ್ ರೀಸೈಕಲ್ ಆಗುತ್ತದೆ. ನಾವು ಪ್ರತಿ ಗಂಟೆಗೆ 11 ಲಕ್ಷ ಕೆ.ಜಿ. ಪ್ಲಾಸ್ಟಿಕ್ ಕಸವನ್ನು ಸಮುದ್ರಕ್ಕೆ ತಳ್ಳುತ್ತಿದ್ದೇವೆ.
- ಕಸವನ್ನು ಎತ್ತಿ ಸಾಗಿಸುವವರ ಸಂಖ್ಯೆ ದೇಶದಲ್ಲಿ ಎರಡು ಕೋಟಿ ದಾಟಿದೆ. ಎಳೆಯರು, ಯುವಕರು, ಮಹಿಳೆಯರು ಮತ್ತು ವೃದ್ಧರಾದಿಯಾಗಿ ಎಲ್ಲರೂ ಕಸ ಎತ್ತುತ್ತಾರೆ. ಅದವರ ಜೀವನೋಪಾಯದ ಮಾರ್ಗವೂ ಹೌದು.

ಇವರಿಂದ ಕಸ ಖರೀದಿಸುವ ಬಹುರಾಷ್ಟ್ರೀಯ ಕಂಪನಿಗಳು ಗಳಿಕೆಯ ಲಾಭವನ್ನು ಮುಚ್ಚಿಡುವುದು, ನಿಷೇಧಿತ ವಸ್ತುಗಳನ್ನು ಉತ್ಪಾದಿಸುವುದು, ಬಳಸುವುದು, ಅದು ಬೆಳಕಿಗೆ ಬರದಂತೆ ತಡೆಯಲು ನಿಯಂತ್ರಣ ವಿಭಾಗದ ಅಧಿಕಾರಿಗಳಿಗೆ ಲಂಚ ಕೊಡುವುದು, ವಹಿವಾಟಿನ ವಿವರಗಳಲ್ಲಿ ಗೋಲ್ಮಾಲ್ ಮಾಡುವುದು ಮುಂತಾದ ನೀಚ ಕೆಲಸಗಳಲ್ಲಿ ನಿರತವಾಗಿವೆ.

### ಬೇಕಾಬಿಟ್ಟಿ ಕಸದ ಎಸೆತ

ನಮ್ಮಲ್ಲಿ ಎಲ್ಲೆಂದರಲ್ಲಿ ಕಸ ಬಿಸಾಕುವ ಪ್ರವೃತ್ತಿ ರಕ್ತದಲ್ಲಿಯೇ ಬಂದಿರುವಂತಿದೆ. ಮನೆಯಿಂದ ಕಸ ಹೊರಗೆ ಹೋದರಾಯಿತು ಎನ್ನುವ ಧೋರಣೆಯ ನಗರಗಳ ವಿದ್ಯಾವಂತ ನಾಗರಿಕರು ರಾತ್ರಿ ವೇಳೆ ಕಸವನ್ನು ಎಲ್ಲೆಂದರಲ್ಲಿ ಬಿಸಾಕುತ್ತಾರೆ. ನಗರ ಪಾಲಿಕೆಯವರು ಅಲ್ಲಿಂದ ಸಾಗಿಸುವವರೆಗೆ ಅಪಾಯಕಾರಿ ಔಷಧ ಜಾನುವಾರುಗಳ ಹೊಟ್ಟೆ ಸೇರುತ್ತದೆ.

ಭೂಭರ್ತಿ ತಾಣಗಳ ಪ್ಲಾಸ್ಟಿಕ್‌ನಿಂದ ರಾಸಾಯನಿಕಗಳ ಸೋರಿಕೆ ಮತ್ತು ಇತರೆ ಕಸದಿಂದ ಕೊಳೆತ ಕಸದ ಮುದ್ದೆ ದೊರಕುತ್ತದೆ. ಇನ್ನೂ ಕೆಲವು ಭೂಭರ್ತಿ ತಾಣಗಳಲ್ಲಿ ಬೃಹತ್ ಪ್ಲಾಸ್ಟಿಕ್ ತೊಟ್ಟಿಗಳನ್ನು ಇರಿಸಿರುವುದರಿಂದ ಅದರಲ್ಲಿನ ಕಸ ಮಣ್ಣಿನೊಂದಿಗೆ ವರ್ತಿಸದೆ ಅಲ್ಲಿಯೇ ಬಿಡಿ ಬಿಡಿಯಾಗಿ ಗುಡ್ಡೆಯಾಗಿರುತ್ತದೆ. ದನ ಕರುಗಳ ಹೊಟ್ಟೆಯಲ್ಲಿ ಅವುಗಳ ಕರುಳಿನ ಗಾತ್ರಕ್ಕಿಂತ ದೊಡ್ಡದಾದ ಪ್ಲಾಸ್ಟಿಕ್ ಉಂಡೆಗಳು ಪತ್ತೆಯಾಗುತ್ತಿವೆ.

ಇದಕ್ಕೆಲ್ಲಾ ಮುಕ್ತಿ ಇಲ್ಲವೇ? ಇದ್ದರೆ ಯಾವಾಗ? ಈ ಪ್ರಶ್ನೆಗಳಿಗೆ ಸರಳ ಉತ್ತರಗಳಿಲ್ಲ. ಕಸದ ಅನಿಯಂತ್ರಿತ ಉತ್ಪಾದನೆ, ಎಸೆತ, ಭೂಭರ್ತಿಗಳು ನಗರ ಪಾಲಿಕೆಗಳಿಗೆ ತಲೆನೋವು. ಪ್ಲಾಸ್ಟಿಕ್ ಕಸದ ಸಮಸ್ಯೆಯನ್ನು ಬಗೆಹರಿಸಲು ಒಂದಿಲ್ಲೊಂದು ಪರಿಹಾರದ ಮಾತು ಅಲ್ಲಲ್ಲಿ ನಿರಂತರವಾಗಿ ಕೇಳಿಬರುತ್ತದೆ. ಅದರಲ್ಲಿ ಪ್ರಮುಖವಾದದ್ದು ಪ್ಲಾಸ್ಟಿಕ್ ಕಸವನ್ನು ರಸ್ತೆ ನಿರ್ಮಾಣಕ್ಕೆ ಬಳಸಿಕೊಳ್ಳುವುದು. ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ರಸ್ತೆಗೆ ಬಳಸಿದರೆ ಅರ್ಧಕ್ಕರ್ಧ ಪ್ಲಾಸ್ಟಿಕ್ ಕಸ ನಿರ್ಮೂಲನೆಯಾಗುತ್ತದೆ ಎಂಬುದು ದೇಶಾವರಿ ಮಾತು.



### ಬೇರೆ ದೇಶಗಳಿಗೆ ನಮ್ಮ ಕಸ!

ಕಸ ನಿರ್ವಹಣೆಗೆ ಸುಲಭ ಪರಿಹಾರವೆಂದರೆ ನಮ್ಮ ದೇಶದ ಕಸವನ್ನು ಬೇರೆ ದೇಶಗಳಿಗೆ ವರ್ಗಾಯಿಸುವುದು. ಇದಕ್ಕೆ ಆಶ್ಚರ್ಯಪಡಬೇಕಿಲ್ಲ. ನಿಮಗೆ ನಿಂಬಿ (NIMBY – ನಾಟ್ ಇನ್ ಮೈ ಬ್ಯಾಕ್‌ಯಾರ್ಡ್) ನೆನಪಿರಬಹುದು. ಅಂದರೆ ಇದು ನನ್ನ ಮನೆಯ ಹಿತ್ತಲಿನಲ್ಲಿ ಇರುವಂಥದ್ದಲ್ಲ ಎಂದರ್ಥ. ಶ್ರೀಮಂತ ರಾಷ್ಟ್ರಗಳು ತಮ್ಮ ದೇಶಕ್ಕೆ ಬೇಡವಾದ ವಿಷಕಾರಿ ಕಸ ಮತ್ತು ತಂತ್ರಜ್ಞಾನಗಳೆಲ್ಲವನ್ನು ಬಡ ದೇಶಗಳಿಗೆ ವರ್ಗಾಯಿಸುವುದನ್ನು ಶುರು ಮಾಡಿದಾಗ ಮೇಲಿನ ಪದ ಬಳಕೆಗೆ ಬಂದಿತ್ತು. ಈಗ ಅದು ಕಸದ ಮಟ್ಟಿಗೆ ಜಾರಿಯಲ್ಲಿದೆ.

### ಪ್ಲಾಸ್ಟಿಕ್ ರಸ್ತೆ: ಏನು? ಎತ್ತ?

ಪ್ಲಾಸ್ಟಿಕ್ ರಸ್ತೆ ಎಂದಾಕ್ಷಣ ರಸ್ತೆ ನಿರ್ಮಿಸಲು ಕೇವಲ ಪ್ಲಾಸ್ಟಿಕ್ ಬಳಸಿರುವುದಿಲ್ಲ. ಪ್ಲಾಸ್ಟಿಕ್ ರಸ್ತೆ ನಿರ್ಮಿಸುವಾಗ ಅದರಲ್ಲಿ ಶೇ. 10ರಷ್ಟು ಪ್ಲಾಸ್ಟಿಕ್ ಮತ್ತು ಉಳಿದ 90 ಭಾಗ ಬಿಟುಮೆನ್ (ಒಂದು ಬಗೆಯ ಅಂಟುರಾಡಿ) ಇರುತ್ತದೆ. ಒಂದು ಕಿಲೋ ಮೀಟರ್ ಪ್ಲಾಸ್ಟಿಕ್‌ಯುಕ್ತ ರಸ್ತೆ ಮಾಡಲು ಒಂದು ಟನ್ ಪ್ಲಾಸ್ಟಿಕ್ ಬೇಕು. ಅದು ಐವತ್ತು ಸಾವಿರ ಏಕ ಬಳಕೆಯ ಪ್ಲಾಸ್ಟಿಕ್‌ನ ತಿಂಡಿ ಡಬ್ಬಿಗಳು, ಒಂದು ಮುಕ್ಕಾಲು ಲಕ್ಷ ಟನ್ ಏಕಬಳಕೆಯ ಪ್ಲಾಸ್ಟಿಕ್ ಕೈ ಚೀಲಗಳನ್ನು ಒಳಗೊಂಡಿರುತ್ತದೆ.

ಪ್ಲಾಸ್ಟಿಕ್ ತ್ಯಾಜ್ಯವನ್ನು ನಾವು ಎಲ್ಲೆಂದರಲ್ಲಿ ಬಿಸಾಡುತ್ತೇವೆ ಇಲ್ಲವೇ ಬೆಂಕಿ ಇಡುತ್ತೇವೆ. ಇಷ್ಟೊಂದು ಪ್ರಮಾಣದ ಪ್ಲಾಸ್ಟಿಕ್ ಅನ್ನು ಸುಟ್ಟರೆ ಮೂರು ಟನ್‌ನಷ್ಟು ಇಂಗಾಲದ ಡೈ ಆಕ್ಸೈಡ್ ವಾತಾವರಣಕ್ಕೆ ಹೊಮ್ಮುತ್ತದೆ. ಇದರ ಬದಲು ಅದನ್ನು ರಸ್ತೆಗೆ ಬಳಸುವುದೇ ಸೂಕ್ತ ಎಂಬ ಅಭಿಪ್ರಾಯ ಬಲವಾಗಿದೆ.

5 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ನಗರಗಳ ಸುತ್ತಲಿನ ರಸ್ತೆ ನಿರ್ಮಿಸಲು ಪ್ಲಾಸ್ಟಿಕ್ ತ್ಯಾಜ್ಯ ಬಳಸಲೇಬೇಕೆಂದು ಭಾರತ ಸರಕಾರ 2015ರಲ್ಲಿ ನಿಯಮ ರೂಪಿಸಿದೆ. ಪ್ಲಾಸ್ಟಿಕ್ ರಸ್ತೆಯ ನಿರ್ಮಾಣ ತಂತ್ರಜ್ಞಾನದ ಹಕ್ಕುಸ್ವಾಮ್ಯವನ್ನು ಪಡೆದಿರುವ